## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 101(376) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಬಿ.ಎಂ.ಫಾರೂಖ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 05.12.2023 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರಿನ ಪಣಂಬೂರಿನ ODC (ಓ.ಡಿ.ಸಿ) ರಸ್ತೆ ಯು Y ಜಂಕ್ಷನ್‌ನಿಂದ ಜೋಕಟ್ಟೆ ವರೆಗೆ ನಿರ್ವಹಣೆ ಇಲ್ಲದೇ ಬಹಳ ಹಾಳಾಗಿದ್ದು, ಇತ್ತೀಚಿಗೆ ಅನೇಕ ಅಪಘಾತ ಕೆಲವು ಪ್ರಾಣ ಹಾನಿಯೂ ಸಂಭವಿಸುತ್ತಿರುವುದನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡಿರುವುದೇ; | ಮಂಗಳೂರಿನ ಬೈಕಂಪಾಡಿ ಕೈಗಾರಿಕಾ ಪ್ರದೇಶದ 9.17 ಎಕರೆ ಜಮೀನನ್ನು Mangaluru Refinery & Petrochemical Limited (MRPL) ರವರಿಗೆ ಹಂಚಿಕೆ ಮಾಡಲಾಗಿರುತ್ತದೆ. ಸದರಿ ಜಮೀನಿನಲ್ಲಿ "Y" ಜಂಕ್ಷನ್ ನಿಂದ ಜೋಕಟ್ಟೆ ಜಂಕ್ಷನ್ ವರೆಗೆ ಸುಮಾರು 2.10 ಕಿ.ಮೀ ರಸ್ತೆಯನ್ನು Mangaluru Refinery & Petrochemical Limited (MRPL) ರವರು ಈ ಹಿಂದೆಯೇ ನಿರ್ಮಿಸಿರುತ್ತಾರೆ.<br><br>ಸದರಿ 2.10 ಕಿ.ಮೀ ಉದ್ದದ Over Dimensional Consignment (ODC) ರಸ್ತೆಯನ್ನು Mangaluru Refinery & Petrochemical Limited (MRPL) ರವರೇ ತಮಗೆ ಹಂಚಿಕೆ ಮಾಡಿರುವ ಜಮೀನಿನಲ್ಲಿ ನಿರ್ಮಿಸಿರುವುದರಿಂದ, ದುರಸ್ಥಿ ಹಾಗೂ ನಿರ್ವಹಣೆ ಕಾಮಗಾರಿಯನ್ನು MRPL ವತಿಯಿಂದ ಕೈಗೊಳ್ಳಬೇಕಾಗಿರುತ್ತದೆ. |
| ಆ) | ಹಾಗಿದ್ದಲ್ಲಿ ಸದರಿ 2023-24 ನೇ ಸಾಲಿನಲ್ಲಿ ಅಪಾಯಕಾರಿಯಾದ ಈ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವ ಕಾರ್ಯಸೂಚಿ, ಯೋಜನೆಗಳು ಸರ್ಕಾರದ ಆದ್ಯತಾ ಪಟ್ಟಿಯಲ್ಲಿ ಸೇರಿದೆಯೇ (ಸಂಪೂರ್ಣ ವಿವರ ನೀಡುವುದು) | |
| ಇ) | ಈ ರಸ್ತೆಯ ದುರವಸ್ಥೆಯ ಬಗ್ಗೆ ಸರ್ಕಾರದ ಗಮನಕ್ಕೆ ಅನೇಕ ಬಾರಿ ತರಲಾಗಿದ್ದರೂ ರಸ್ತೆ ಅಭಿವೃದ್ಧಿ ಕುರಿತು ಇನ್ನು ಯಾವುದೇ ಕ್ರಮ ಕೈಗೊಳ್ಳದೆ ಇರುವುದಕ್ಕೆ ಕಾರಣಗಳೇನು; | |
| ಈ) | ಸದರಿ ಓ.ಡಿ.ಸಿ ರಸ್ತೆಯ ಅಗಲೀಕರಣ ದುರಸ್ತಿ, ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಯಾವ ಕಾಲಮಿತಿಯಲ್ಲಿ ಕಾರ್ಯ ಪ್ರಾರಂಭ ಮಾಡುವುದು ಈ ಕುರಿತು ಸರ್ಕಾರದ ಖಚಿತ ನಿಲುವು ಯೋಜನೆಗಳೇನು? (ಅಂಕಿ ಅಂಶಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು) | |

**ಸಂಖ್ಯೆ: ಸಿಐ 298 ಐಎಪಿ 2023**

(ಎಂ.ಬಿ. ಪಾಟೀಲ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು.